

# ಚೆಣ್ಣರಿಗೆ ಬಣ್ಣದುಡುಗೆ

**ಹಬ್ಬದ ದಿನಗಳಲ್ಲಿ ಸಾಂಪ್ರದಾಯಿಕ ಉಡುಗೆ ತೊಟ್ಟ ಪುಟ್ಟ ಪುಟ್ಟ ಪೋರಿಯರು ಸಂಭ್ರಮದಿಂದ ಓಡಾಡುವುದನ್ನು ನೋಡುವುದೇ ಚೆಂದ. ಈಗ ಮಕ್ಕಳ ಉಡುಪು ಕೇವಲ ಬಟ್ಟೆಯಲ್ಲ, ಅದು ಸಂತೋಷದ ಅಧ್ಯಾಯ. ಭಾವನೆಗಳ ಬುತ್ತಿ...!**

■ ವಿದ್ಯಾ ಹಂಚಿನಮನಿ

ಪುಟ್ಟ ಪುಟ್ಟ ಹೆಜ್ಜೆ ಇಟ್ಟ ಪುಟಾಣಿ ಪೋರಿಯರು ಜರಿ ಲಂಗ ತೊಟ್ಟು, ಮನೆ ತುಂಬ ಓಡಾಡಿದರೇ ಹಬ್ಬದ ಸಂಭ್ರಮ ದುಪ್ಪಟ್ಟಾಗುತ್ತದೆ. ಮನೆಯಲ್ಲಿ ಮಕ್ಕಳಿದ್ದರೆ ಅದೇ ಸಂಭ್ರಮ. ಗೌರಿ ಗಣೇಶ ಹಬ್ಬದ ದಿನಗಳಲ್ಲಿ ಮಕ್ಕಳಿಗೆ ಬಣ್ಣ ಬಣ್ಣದ ಚೆಂದದ ಬಟ್ಟೆ ಹಾಕಿ, ಅಂದವಾಗಿ ಅಲಂಕಾರ ಮಾಡುವುದರಲ್ಲಿ ಪೋಷಕರಿಗೆ ಅದೇನೋ ಆನಂದ. ಈಗೆಲ್ಲ ಆಯಾ ಹಬ್ಬಗಳು ಹಾಗೂ ರಾಷ್ಟ್ರೀಯ ದಿನಾಚರಣೆಗಳಂದು ಮಕ್ಕಳಿಗೆ ಅಲಂಕಾರ ಮಾಡಿ, ಒಳ್ಳೊಳ್ಳೆಯ ಫೋಟೊ ಕ್ಲಿಕ್ಕಿಸಿ ಸೋಷಿಯಲ್ ಮೀಡಿಯಾದಲ್ಲಿ ಅಪ್‌ಲೋಡ್ ಮಾಡಿದರೆ ಹೆತ್ತವರಿಗೇನೋ ಖುಷಿ. ಆಕರ್ಷಕವಾಗಿರುವ ಮಕ್ಕಳ ಉಡುಗೆಗಳು ಚಿಣ್ಣರ ಸೌಂದರ್ಯಕ್ಕೆ ಇನ್ನಷ್ಟು ಮೆರುಗು ನೀಡುತ್ತವೆ.

ಮುದ್ದಾದ ಕೂಸಿಗೊಂದು ಚೆಂದದ ಪುಟ್ಟ ದಾವಣಿ ಲಂಗ ತೊಡಿಸಿದಾಗ, ಹಟ ಮಾಡುವ ಮುದ್ದುಕೃಷ್ಣನಿಗೆ ಕೃಷ್ಣನಂತೆಯೇ ಅಲಂಕಾರ ಮಾಡಿದಾಗ ನೋಡಲು ಎರಡು ಕಣ್ಣುಗಳು ಸಾಲದು. ಅಮ್ಮಂದಿರಂತೂ ದಿನವಿಡೀ ದೃಷ್ಟಿ ತೆಗೆಯುವ ಕೆಲಸವನ್ನೇ ಮಾಡಿಬಿಡುತ್ತಾರೆ. ಹಬ್ಬದ ಶುಭ ಸಂದರ್ಭಗಳಲ್ಲಿ ಮಕ್ಕಳಿಗೆ ಮನಪೂರ್ವಕವಾಗಿ ಹರಸಿ ಹಾರೈಸಿ ಸಂತಸಪಡುತ್ತಾರೆ. ಮೊದಲೆಲ್ಲ ಮಕ್ಕಳ ಬಟ್ಟೆಗಳಲ್ಲಿ ಹೆಚ್ಚು ವೈವಿಧ್ಯ ಇರುತ್ತಿರಲಿಲ್ಲ. ಹುಡುಗಿಯರಿಗೆ ಫ್ರಾಕ್, ದಾವಣಿ–ಲಂಗದಂತಹ ತುಸು ಹೆಚ್ಚೇ ಆಯ್ಕೆಗಳಿದ್ದರೂ ವಿನ್ಯಾಸದಲ್ಲಿ ಹೆಚ್ಚು ಬಗೆ ಇರಲಿಲ್ಲ. ಹುಡುಗರಿಗೂ ಅಷ್ಟೇ ಟೀ ಶರ್ಟ್– ಪ್ಯಾಂಟ್, ಪೈಜಾಮಾದಂತಹ ಬಟ್ಟೆಗಳು ಎಲ್ಲಾ ಸಂದರ್ಭಗಳಲ್ಲಿಯೂ ಧರಿಸುವಂಥವುಗಳಾಗಿದ್ದವು. ಆದರೆ ಈಗ ಹಾಗಿಲ್ಲ. ದೊಡ್ಡವರಿಗಿಂತ ಮಕ್ಕಳ ಬಟ್ಟೆ ಏನೂ ಕಡಿಮೆ ಇಲ್ಲ. ದೊಡ್ಡವರ ಬಟ್ಟೆಗಿಂತ ಮಕ್ಕಳ ಉಡುಪು ತುಸು ದುಬಾರಿಯೂ ಆಗಿವೆ. ಆದರೆ ಮಕ್ಕಳ ಬಟ್ಟೆಯನ್ನು ಆಯ್ಕೆ ಮಾಡುವಾಗ ಪೋಷಕರು ಜಾಗರೂಕರಾಗಿರಲೇಬೇಕು. ಚೆಂದ ಕಾಣುವುದೆಂದು ಯಾವುದೋ ಬಟ್ಟೆ ತೊಡಿಸಿದರೆ, ಅದು ಮಕ್ಕಳಿಗೆ ಆರಾಮದಾಯಕವಾಗಿಲ್ಲದಿದ್ದರೆ ತೊಂದರೆ ಉಂಟಾಗುತ್ತದೆ. ಇದರಿಂದ ಮಕ್ಕಳಿಗೆ ರ್‍ಯಾಶಸ್ ಆಗುವುದೂ ಉಂಟು. ಹೀಗಾಗಿ ಒಳ್ಳೆಯ ಗುಣಮಟ್ಟದ ಬಟ್ಟೆಯನ್ನೇ ಆಯ್ಕೆ ಮಾಡಿಕೊಳ್ಳಬೇಕು. ಏಕೆಂದರೆ ಮಕ್ಕಳು ನಮ್ಮಂತೆ ತಮಗಾಗುತ್ತಿರುವ ಕಿರಿಕಿರಿಯನ್ನು ಹೇಳಿಕೊಳ್ಳಲಾಗುವುದಿಲ್ಲ.

ಮಾರುಕಟ್ಟೆಯಲ್ಲೀಗ ಮಕ್ಕಳ ತರಹೇವಾರಿ ಬಟ್ಟೆಗಳಿವೆ. ಒಂದಕ್ಕಿಂತ ಒಂದು ಚೆಂದದ ಬಟ್ಟೆಗಳು. ಹೀಗಾಗಿ ಯಾವ ಸಂದರ್ಭಕ್ಕೆ ಎಂತಹ ಬಟ್ಟೆ ಆಯ್ಕೆ ಮಾಡುವುದು ಎಂದೂ ಪೋಷಕರು ಗೊಂದಲಕ್ಕೀಡಾಗುವುದುಂಟು.

## ಮಕ್ಕಳ ಉಡುಪು ವೈವಿಧ್ಯ

- ಮಕ್ಕಳಿಗೆ ಬಟ್ಟೆ ಆಯ್ಕೆ ಮಾಡಿಕೊಳ್ಳುವಾಗ, ಬಟ್ಟೆಗಳ ಚೆಂದಕ್ಕಿಂತ ಅದನ್ನು ಧರಿಸಿದಾಗ ಮಗು ಎಷ್ಟು ಖುಷಿಪಡುತ್ತದೆ ಹಾಗೂ ಮಗುವಿಗೆ ಆರಾಮ ಎನಿಸಬಹುದು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ.
- ಮಕ್ಕಳದು ಮೃದು ಚರ್ಮವಾದ್ದರಿಂದ ಬಟ್ಟೆಯ ಗುಣಮಟ್ಟ ಮುಖ್ಯ. ಹತ್ತಿ ಮತ್ತು ಲಿನಿನ್ ಉಡುಪುಗಳು ಚರ್ಮಕ್ಕೆ ತಂಪು, ಆರಾಮ ಹಾಗೂ ಉಸಿರಾಡುವಂತಿರುತ್ತವೆ. ಒಣ ಹವಾಮಾನದಲ್ಲೂ,

